## ಕರ್ನಾಟಕ ವಿಧಾನ ಪರಿಷತ್ತು

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 466
2. ಸದಸ್ಯರ ಹೆಸರು : ಕೆ.ಎ ತಿಪ್ಪೇಸ್ವಾಮಿ,
3. ಉತ್ತರಿಸಬೇಕಾದ ದಿನಾಂಕ : 12.12.2024.
4. ಉತ್ತರಿಸುವ ಸಚಿವರು : ಮಾನ್ಯ ಸಣ್ಣ ನೀರಾವರಿ, ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರು.

| ಕ್ರ ಸಂ | ಪ್ರಶ್ನೆ | ಉತ್ತರ |
|---|---|---|
| ಅ | ರಾಜ್ಯದಲ್ಲಿ ರಚಿವಾಗಿರುವ ಕೆರೆ ಸಂರಕ್ಷಣೆ ಮತ್ತು ಅಭಿವೃದ್ಧಿ ಪ್ರಾಧಿಕಾರವನ್ನು ಯಾವ ಕಾಯಿದೆ ಅಡಿಯಲ್ಲಿ ಸ್ಥಾಪಿಸಲಾಗಿದೆ; ಈ ಪ್ರಾಧಿಕಾರದ ಧ್ಯೇಯೋದ್ದೇಶಗಳು ಯಾವುವು; ಪ್ರಾಧಿಕಾರದ ಮುಖ್ಯಸ್ಥರು ಮತ್ತು ಸದಸ್ಯರುಗಳು ಒಳಗೊಂಡಂತೆ ಪೂರ್ಣ ಮಾಹಿತಿ ನೀಡುವುದು; | ಕರ್ನಾಟಕ ಕೆರೆ ಸಂರಕ್ಷಣೆ ಮತ್ತು ಅಭಿವೃದ್ಧಿ ಪ್ರಾಧಿಕಾರವನ್ನು ಕರ್ನಾಟಕ ಕೆರೆ ಸಂರಕ್ಷಣೆ ಮತ್ತು ಅಭಿವೃದ್ಧಿ ಪ್ರಾಧಿಕಾರದ ಅಧಿನಿಯಮ 2014 ರನ್ವಯ ಸ್ಥಾಪಿಸಲಾಗಿರುತ್ತದೆ.<br><br>ಮುಂದುವರೆದು, ಕರ್ನಾಟಕ ಕೆರೆ ಸಂರಕ್ಷಣೆ ಮತ್ತು ಅಭಿವೃದ್ಧಿ ಪ್ರಾಧಿಕಾರ ಅಧಿನಿಯಮ-2014 ಕ್ಕೆ 2018 ರಲ್ಲಿ ತಿದ್ದುಪಡಿ ಮಾಡಲಾಗಿದ್ದು, ಸದರಿ ತಿದ್ದುಪಡಿಯನ್ವಯ ಸನ್ಮಾನ್ಯ ಮುಖ್ಯಮಂತ್ರಿಗಳು ಈ ಪ್ರಾಧಿಕಾರದ ಅಧ್ಯಕ್ಷರಾಗಿರುತ್ತಾರೆ ಮತ್ತು ರಾಜ್ಯದ ಎಲ್ಲಾ ಕೆರೆಗಳು (2000 ಹೆಕ್ಟೇರ್ ಹಾಗೂ ಅದಕ್ಕಿಂತ ಹೆಚ್ಚಿನ ಅಚ್ಚುಕಟ್ಟು ಹೊಂದಿರುವ ಕೆರೆಗಳನ್ನು ಹೊರತುಪಡಿಸಿ) ಪ್ರಾಧಿಕಾರದ ಅಧಿನಿಯಮದ ವ್ಯಾಪ್ತಿಯಲ್ಲಿ ಬರುತ್ತವೆ.<br><br>ಪ್ರಾಧಿಕಾರವು ತನ್ನ ಅಧಿನಿಯಮದ ವ್ಯಾಪ್ತಿಯಲ್ಲಿ ಬರುವ ಎಲ್ಲಾ ಕೆರೆಗಳ ಮೇಲೆ ನಿಯಾಮಕ ನಿಯಂತ್ರಣವನ್ನು (Regulatory Control) ಹೊಂದಿರುತ್ತದೆ.<br><br>ಪ್ರಾಧಿಕಾರದ ಧ್ಯೇಯೋದ್ದೇಶಗಳ ವಿವರ, ಮುಖ್ಯಸ್ಥರು ಹಾಗೂ ಸದಸ್ಯರುಗಳ ವಿವರಗಳನ್ನು ಅನುಬಂಧ-1ರಲ್ಲಿ ನೀಡಲಾಗಿದೆ. |
| ಆ | ರಾಜ್ಯದಲ್ಲಿ ಒಟ್ಟು ಸಣ್ಣ ನೀರಾವರಿ ಕೆರೆಗಳು ಎಷ್ಟು; ಮತ್ತು ಇದುವರೆಗೂ ಎಷ್ಟು ಕೆರೆಗಳ ಬಗ್ಗೆ ಸರ್ವೆ ಕಾರ್ಯ ಕೈಗೊಳ್ಳಲಾಗಿದೆ; ಸರ್ವೆ ಮತ್ತು ಇಲಾಖೆ ವರದಿ ಯಂತೆ ಎಷ್ಟು ಸಣ್ಣ ಕೆರೆಗಳನ್ನು ಒತ್ತುವರಿ ಮಾಡಲಾಗಿದೆ; ಮತ್ತು ಎಷ್ಟು ಒತ್ತುವರಿಗಳನ್ನು ತೆರವುಗೊಳಿಸಲಾಗಿದೆಯೇ; (ಜಿಲ್ಲಾವಾರು ಪೂರ್ಣ ಮಾಹಿತಿ ನೀಡುವುದು) | ಸಣ್ಣ ನೀರಾವರಿ ಇಲಾಖೆ ವ್ಯಾಪ್ತಿಯಲ್ಲಿ ಒಟ್ಟು 3778 ಸಣ್ಣ ನೀರಾವರಿ ಕೆರೆಗಳಿರುತ್ತವೆ. ಇದುವರೆವಿಗೂ ಒಟ್ಟು 2582 ಕೆರೆಗಳಿಗೆ ಸರ್ವೆ ಕಾರ್ಯ ಕೈಗೊಳ್ಳಲಾಗಿದೆ. ಒತ್ತುವರಿಯಾಗಿರುವ ಹಾಗೂ ಒತ್ತುವರಿ ತೆರವುಗೊಳಿಸಿರುವ ಕೆರೆಗಳ ಜಿಲ್ಲಾವಾರು ವಿವರಗಳನ್ನು ಅನುಬಂಧ-2ರಲ್ಲಿ ನೀಡಲಾಗಿದೆ. |
| ಇ | ರಾಜ್ಯದಲ್ಲಿ ಸಣ್ಣ ಕೆರೆಗಳ ಹೂಳೆತ್ತುವ ಕಾರ್ಯಕ್ರಮ ಯಾವ ಹಂತದಲ್ಲಿದೆ; ಕಳೆದ 5 ವರ್ಷಗಳಲ್ಲಿ ಕೆರೆಗಳ ದುರಸ್ತಿ ಮತ್ತು ಉಡಾವಣೆಗಾಗಿ ರಾಜ್ಯ ಸರ್ಕಾರ ನೀಡಿರುವ ಅನುದಾನವೆಷ್ಟು? (ಪೂರ್ಣ ಮಾಹಿತಿ ನೀಡುವುದು) | ಸಣ್ಣ ನೀರಾವರಿ ಇಲಾಖೆಯಿಂದ ಕೆರೆಗಳ ದುರಸ್ತಿ ಕಾಮಗಾರಿಗಳನ್ನು ಕೈಗೊಳ್ಳಲಾಗುತ್ತಿದ್ದು, ಕೆರೆಗಳಲ್ಲಿನ ಹೂಳೆತ್ತುವ ಅವಶ್ಯಕತೆಗೆ ಅನುಗುಣವಾಗಿ ಕೆರೆಗಳ ದುರಸ್ತಿ ಕಾಮಗಾರಿಗಳಲ್ಲಿ ಹೂಳೆತ್ತುವ ಕಾಮಗಾರಿಗೆ ಅವಕಾಶ ಕಲ್ಪಿಸಿಕೊಂಡು ಕಾಮಗಾರಿಗಳನ್ನು ನಿರ್ವಹಿಸಲಾಗುತ್ತಿದೆ.<br><br>ಕಳೆದ 5 ವರ್ಷಗಳಲ್ಲಿ ಕೆರೆಗಳ ದುರಸ್ತಿ ಹಾಗೂ ಅಭಿವೃದ್ಧಿಗಾಗಿ ರಾಜ್ಯ ಸರ್ಕಾರ ನೀಡಿರುವ ಅನುದಾನದ ವಿವರಗಳನ್ನು ಅನುಬಂಧ-3ರಲ್ಲಿ ನೀಡಲಾಗಿದೆ. |

ಕಡತ ಸಂಖ್ಯೆ: **MID/117/LCQ/2024**

**(ಎನ್.ಎಸ್. ಬೋಸರಾಜು)**
ಸಣ್ಣ ನೀರಾವರಿ, ಹಾಗೂ ವಿಜ್ಞಾನ

**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಕೆ.ಎ. ತಿಪ್ಪೇಸ್ವಾಮಿ (ನಾಮ ನಿರ್ದೇಶನ ಹೊಂದಿದವರು) ರವರ ಚುಕ್ಕೆ ರಹಿತ ಪ್ರಶ್ನೆ ಸಂಖ್ಯೆ : 466 ಕ್ಕೆ ಸಂಬಂಧಿಸಿದ ಅನುಬಂಧ – 1**

**ಕರ್ನಾಟಕ ಕೆರೆ ಸಂರಕ್ಷಣೆ ಮತ್ತು ಅಭಿವೃದ್ಧಿ ಪ್ರಾಧಿಕಾರ ಅಧಿನಿಯಮ – 2014 ರ ಪ್ರಕರಣ 5 ರನ್ವಯ ಪ್ರಾಧಿಕಾರವು ತನ್ನದೇ ಪ್ರಕಾರ್ಯಗಳನ್ನು ಹೊಂದಿದ್ದು, ವಿವರ ಈ ಕೆಳಕಂಡಂತಿದೆ;**

1. ಕೆರೆಯ ಒತ್ತುವರಿಯನ್ನು ಪ್ರತಿಬಂಧಿಸುವುದು ಮತ್ತು ತೆರವುಗೊಳಿಸುವುದು ಒಳಗೊಂಡಂತೆ ತನ್ನ ಅಧಿಕಾರ ವ್ಯಾಪ್ತಿಯೊಳಗೆ ಬರುವ ಎಲ್ಲಾ ಕೆರೆಗಳ ಮೇಲೆ ನಿಯಾಮಕ ನಿಯಂತ್ರಣವನ್ನು ಹೊಂದಿರುವುದು;
2. ಕ್ಷೀಣಿಸುತ್ತಿರುವ ಅಂತರ್ಜಲವನ್ನು ಮರುಭರ್ತಿಗೊಳಿಸಲು ಸಂಬಂಧಪಟ್ಟ ಸರ್ಕಾರಿ ಇಲಾಖೆಗಳು, ಸ್ಥಳೀಯ ಮತ್ತು ಇತರ ಪ್ರಾಧಿಕಾರಿಗಳ ನೆರವಿನೊಂದಿಗೆ ಸಮಗ್ರ ಸಂಪರ್ಕವನ್ನು ಸಾಧಿಸಿಕೊಳ್ಳುವ ಮೂಲಕ ಕೆರೆಗಳನ್ನು, ಕೊಳಗಳನ್ನು, ಸರೋವರಗಳನ್ನು ರಕ್ಷಿಸುವುದು, ಸಂರಕ್ಷಿಸುವುದು, ಜೀರ್ಣೋದ್ಧಾರಗೊಳಿಸುವುದು, ಪುನರ್ ರೂಪಿಸುವುದು ಮತ್ತು ಪೂರ್ವಸ್ಥಿತಿಗೆ ತರುವುದು;
3. ಯಾವುದೇ ಅಥವಾ ಎಲ್ಲಾ ಕೆರೆಗಳಿಗೆ ಸಂಬಂಧಿಸಿದಂತೆ ಪರಿಸರಾತ್ಮಕ ಪ್ರಭಾವಗಳ ನಿರ್ಧರಣಾ ಅಧ್ಯಯನವನ್ನು ಕೈಗೊಳ್ಳುವುದು;
4. ಭೌಗೋಳಿಕ ಮಾಹಿತಿ ವ್ಯವಸ್ಥೆಯ ಸಹಾಯದೊಂದಿಗೆ ಕೆರೆಗಳು ಮತ್ತು ಅವುಗಳ ಸುತ್ತಮುತ್ತಲ ಪ್ರದೇಶಗಳ ಪರಿಸರಾತ್ಮಕ ಯೋಜನೆ ಮತ್ತು ನಕ್ಷೆಯ ರಚನೆಯನ್ನು ಕೈಗೆತ್ತಿಕೊಳ್ಳುವುದು ಮತ್ತು ಕೆರೆಗಳು ಹಾಗೂ ಅವುಗಳ ಜಲಾನಯನಗಳ ಅಂಕಿಅಂಶಗಳನ್ನು (ಡೇಟಾಬೇಸ್) ಮತ್ತು ಅಟ್ಲಾಸನ್ನು ಸಿದ್ಧಪಡಿಸುವುದು;
5. ಕೆರೆಗಳ ಸಮಗ್ರ ಅಭಿವೃದ್ಧಿಗೆ ಯೋಜನೆಯನ್ನು ಸಿದ್ಧಪಡಿಸುವುದು ಹಾಗೂ ಕೆರೆಗಳ ವೆಚ್ಚ ಮತ್ತು ಅಭಿವೃದ್ಧಿಯನ್ನು ಮೇಲ್ವಿಚಾರಿಸುವುದು.
6. ಸಮಪ್ರಮಾಣದ ಆರ್ಥಿಕ ಬೆಳವಣಿಗೆ ಮತ್ತು ಕೃಷಿಯಲ್ಲಿನ ಸಾಮರ್ಥ್ಯಕ್ಕಾಗಿ ಭೂಮಿ ಮತ್ತು ಜಲನಿರ್ವಹಣೆಯ ಸಂಯೋಜಿತ ಪ್ರಯತ್ನದ ಮುಖಾಂತರ ಕೆರೆಯ ಹೂಳನ್ನು ತೆಗೆಯುವುದು ಹಾಗೂ ಜಲಸಂಪನ್ಮೂಲ ಸಾಮರ್ಥ್ಯವನ್ನು ಮತ್ತು ಕೃಷಿ ಉತ್ಪಾದಕತೆಯನ್ನು ಪ್ರೋತ್ಸಾಹಿಸುವುದು;
7. ರೈತರ ಪೂರ್ಣ ಸಾಮರ್ಥ್ಯವನ್ನು ಬಳಸಿಕೊಳ್ಳಲು ಮತ್ತು ಅವರ ನೈಸರ್ಗಿಕ ಸಂಪನ್ಮೂಲಗಳ ಆಧಾರದಲ್ಲಿ ಆದಾಯ, ಉದ್ಯೋಗ ಮತ್ತು ಆರ್ಥಿಕ ಸಾಮರ್ಥ್ಯವನ್ನು ಗರಿಷ್ಠಗೊಳಿಸಲು ವಿವಿಧ ಕೃಷಿ ಉದ್ದಿಮೆಗಳನ್ನು ಸಂಯೋಜಿಸುವುದು, ಪ್ರೋತ್ಸಾಹಿಸುವುದು;
8. ಹೆಚ್ಚುವರಿ ಆದಾಯದ ಉತ್ಪತ್ತಿಗಾಗಿ ಮೀನುಗಾರಿಕೆ ಮತ್ತು ಸಂಬಂಧಿತ ಚಟುವಟಿಕೆಗಳನ್ನು ಪ್ರೋತ್ಸಾಹಿಸುವುದು
9. ಚರಂಡಿಯ ಕಶ್ಮಲಗಳನ್ನು ಕಡಿಮೆ ಮಾಡುವ ಮತ್ತು ಚರಂಡಿಯ ರೊಚ್ಚನ್ನು ಕೆರೆಗಳಿಗೆ ಹರಿಯಬಿಡದಿರುವುದರ ಮೂಲಕ ಜಲ ಜೀವವೈವಿಧ್ಯ, ಜಲಪಕ್ಷಿಗಳು ಮತ್ತು ಜಲೀಯ ಸಸ್ಯಗಳನ್ನು ಸುಧಾರಿಸುವುದು ಮತ್ತು ಅವುಗಳಿಗೆ ಬೇಕಾದ ಪರಿಸರವನ್ನು (ಜೌಗು ಭೂಮಿ) ಸೃಜಿಸುವುದು;
10. ಮಳೆ (ಸ್ಟಾರ್ಮ್) ನೀರು ಚರಂಡಿ ವ್ಯವಸ್ಥೆಯ ಮೂಲಕ ನೀರು ಸಂಗ್ರಹಣೆಗಾಗಿ ಸೌಲಭ್ಯ ಕಲ್ಪಿಸುವುದು, ಸೂಕ್ತವಾದ ಮಣ್ಣಿನ ಮತ್ತು ನೀರಿನ ಸಂರಕ್ಷಣಾ ಕ್ರಮಕೈಗೊಳ್ಳುವ ಮೂಲಕ ಕೆರೆಗಳ ಹೂಳನ್ನು ಕಡಿಮೆ ಮಾಡುವುದು.
11. ಅವಶ್ಯಕತೆಗನುಸಾರವಾಗಿ ನೀರಿನ ಗುಣಮಟ್ಟವನ್ನು ಸುಧಾರಿಸುವುದು ಮತ್ತು ಆ ಬಗ್ಗೆ ನಿಗಾವಹಿಸುವುದು, ಕೆರೆಯ ಜೀವಿ ಪರಿಸ್ಥಿತಿಯನ್ನು ಸಂರಕ್ಷಿಸುವುದು ಹಾಗೂ ಗೃಹ ಬಳಕೆಯ ಮತ್ತು ಕೈಗಾರಿಕಾ ಮಾಲಿನ್ಯಗಳಿಂದ ಅವುಗಳನ್ನು ಸಂರಕ್ಷಿಸುವುದು;
12. ಕುಡಿಯುವುದಕ್ಕಾಗಿ, ನೀರಾವರಿಗಾಗಿ, ಪ್ರವಾಸೋದ್ಯಮ ಉದ್ದೇಶಗಳಿಗಾಗಿ ಅಥವಾ ಪ್ರಾಧಿಕಾರವು ನಿರ್ಧರಿಸಬಹುದಾದಂಥ ಯಾವುದೇ ಇತರ ಉದ್ದೇಶಗಳಿಗಾಗಿ ಕೆರೆಗಳನ್ನು ಬಳಸಿಕೊಳ್ಳುವುದು ಅಥವಾ ಬಳಸಿಕೊಳ್ಳಲು ಅನುಮತಿಸುವುದು;
13. ಸಮುದಾಯಗಳ ಮತ್ತು ಸ್ವಯಂ ಸೇವಾ ಏಜೆನ್ಸಿಗಳು ಕೆರೆಯ ಅಭಿವೃದ್ಧಿಯಲ್ಲಿ ಪಾಲ್ಗೊಳ್ಳುವಿಕೆಯನ್ನು ಪ್ರೋತ್ಸಾಹಿಸುವುದು ಮತ್ತು ಕೆರೆಯನ್ನು ಸಂರಕ್ಷಿಸುವುದು, ಕಾಪಾಡುವುದು ಮತ್ತು ರಕ್ಷಿಸುವುದು ಇವುಗಳಿಗೆ ಸಂಬಂಧಿಸಿದಂತೆ ಸಾರ್ವಜನಿಕ ಜಾಗೃತಿ ಕಾರ್ಯಕ್ರಮಗಳನ್ನು ಪ್ರಾರಂಭಿಸುವುದು;
14. ಸರ್ಕಾರ ಅಥವಾ ಯಾವುದೇ ಸಂಸ್ಥೆಯು ಇದಕ್ಕೆ ಕಳುಹಿಸಬಹುದಾದಂಥ ಯಾವುದೇ ವಿಷಯದ ಮೇಲೆ ಸಲಹೆಯನ್ನು ನೀಡುವುದು;
15. ಕೆರೆಗಳಿಗೆ ಸಂಬಂಧಿಸಿದ ಎಲ್ಲಾ ಪ್ರಸಕ್ತ ವಿಷಯಗಳ ಮೇಲೆ ಸಮಗ್ರ ಮತ್ತು ಸಮನ್ವಯಗೊಳಿಸಿದ ಪ್ರಾಯೋಗಿಕ ಸಂಶೋಧನೆಗೆ ಪ್ರೋತ್ಸಾಹಿಸುವುದು;
16. ಈ ಅಧಿನಿಯಮದ ಉದ್ದೇಶಗಳನ್ನು ಸಾಧಿಸಲು, ಪ್ರಾಧಿಕಾರವು, ಪ್ರತ್ಯಕ್ಷವಾಗಿ ಅಥವಾ ಅಪ್ರತ್ಯಕ್ಷವಾಗಿ, ಅವಶ್ಯಕ, ಅನುಕೂಲಕರ ಅಥವಾ ಆನುಷಂಗಿಕವೆಂದು ಪರಿಗಣಿಸಬಹುದಾದ ಅಂಥ ಇತರ ಕಾರ್ಯಗಳನ್ನು ಮಾಡುವುದು;
17. ರಾಜ್ಯದಲ್ಲಿನ ಎಲ್ಲಾ ಕೆರೆಗಳ ಸಬಲ ಅಂಕಿಅಂಶ (ಸ್ಟ್ರಾಂಗ್ ಡಾಟಾಬೇಸ್)ವನ್ನು ಸೃಜಿಸುವುದು ಮತ್ತು ಕೆರೆಗಳಿಗಾಗಿ ನಡೆಯುವ ಎಲ್ಲಾ ಅಭಿವೃದ್ಧಿ ಚಟುವಟಿಕೆಗಳನ್ನು ನಿಯತಕಾಲದಲ್ಲಿ ದಾಖಲಿಸುವುದು.

**ಪ್ರಾಧಿಕಾರದ ಮುಖ್ಯಸ್ಥರು ಹಾಗೂ ಸದಸ್ಯರುಗಳ ವಿವರ :**

ಈ ಪ್ರಾಧಿಕಾರದ ಅಧಿನಿಯಮದ ಪ್ರಕರಣ 3 ರನ್ವಯ, ಅಧ್ಯಕ್ಷರು, ಉಪಾಧ್ಯಕ್ಷರು, ಸೇರಿದಂತೆ ಒಟ್ಟು 21 ಪದಾಧಿಕಾರಿಗಳು ಇದ್ದು, ಸದರಿ ಪಧಾಧಿಕಾರಿಗಳ ವಿವರ ಇಂತಿದೆ;

| ಕ್ರ.ಸಂ. | ವಿವರ | ಪದನಾಮ |
|---|---|---|
| 1 | ಸನ್ಮಾನ್ಯ ಮುಖ್ಯಮಂತ್ರಿಗಳು, ಕರ್ನಾಟಕ ಸರ್ಕಾರ | ಅಧ್ಯಕ್ಷರು |
| 2 | ಮಾನ್ಯ ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ ಸಚಿವರು, ಕರ್ನಾಟಕ ಸರ್ಕಾರ | ಉಪಾಧ್ಯಕ್ಷರು |
| 3 | ಸದಸ್ಯರುಗಳು<br>[ಪ್ರಧಾನ ಕಾರ್ಯದರ್ಶಿ, ಆಯುಕ್ತರು, ಸದಸ್ಯ ಕಾರ್ಯದರ್ಶಿ, ಅಧ್ಯಕ್ಷರು ಮತ್ತು ಮುಖ್ಯ ಅಭಿಯಂತರರು ಶ್ರೇಣಿ] | 14<br>ಸದಸ್ಯರುಗಳು |
| 4 | ಪರಿಸರ ಮತ್ತು ಜೀವಿಶಾಸ್ತ್ರ ಅಥವಾ ಕೆರೆ ಅಥವಾ ಕೊಳಗಳು ಅಥವಾ ಸರೋವರ ಸಂರಕ್ಷಣೆ ಕ್ಷೇತ್ರದಲ್ಲಿ ತಜ್ಞರಾದವರ ಪೈಕಿ ಸರ್ಕಾರ ನೇಮಕ ಮಾಡಿದವರು.<br>[ಕನಿಷ್ಠ ಒಬ್ಬರು ಮಹಿಳೆ, ಒಬ್ಬರು ಅನುಸೂಚಿತ ಜಾತಿ ಹಾಗೂ ಒಬ್ಬರು ಅನುಸೂಚಿತ ಪಂಗಡ] | 04 ಅಧಿಕಾರೇತರ ಸದಸ್ಯರುಗಳು |
| 5 | ಸರ್ಕಾರದ ಪ್ರಧಾನ ಕಾರ್ಯದರ್ಶಿ / ಕಾರ್ಯದರ್ಶಿ, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ ಹಾಗೂ ಪದನಿಮಿತ್ತ ಮುಖ್ಯ ಕಾರ್ಯನಿರ್ವಹಣಾಧಿಕಾರಿ, ಕ.ಕೆ.ಸಂ.ಅ.ಪ್ರಾ | ಸದಸ್ಯ ಕಾರ್ಯದರ್ಶಿ |

**ಕರ್ನಾಟಕ ಕೆರೆ ಸಂರಕ್ಷಣೆ ಮತ್ತು ಅಭಿವೃದ್ಧಿ ಪ್ರಾಧಿಕಾರದ 14 ಸದಸ್ಯರುಗಳ ವಿವರ:**

| ಕ್ರಮ | ವಿವರ |
|---|---|
| 1 | ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಆರ್ಥಿಕ ಇಲಾಖೆ |
| 2 | ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಕಾನೂನು ಇಲಾಖೆ |
| 3 | ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಇಲಾಖೆ |
| 4 | ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, |
| 5 | ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಕಂದಾಯ ಇಲಾಖೆ. |
| 6 | ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ನಗರಾಭಿವೃದ್ಧಿ ಇಲಾಖೆ, |
| 7 | ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಕೃಷಿ ಇಲಾಖೆ, |
| 8 | ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಪಶುಸಂಗೋಪನಾ ಮತ್ತು ಮೀನುಗಾರಿಕೆ ಇಲಾಖೆ, |
| 9 | ಮುಖ್ಯ ಅಭಿಯಂತರರರು, ಸಣ್ಣ ನೀರಾವರಿ (ದಕ್ಷಿಣ) ಬೆಂಗಳೂರು |
| 10 | ಸದಸ್ಯ ಕಾರ್ಯದರ್ಶಿಗಳು, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ, ಬೆಂಗಳೂರು |
| 11 | ಅಧ್ಯಕ್ಷರು, ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ, ಬೆಂಗಳೂರು. |
| 12 | ಆಯುಕ್ತರು, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, ಬೆಂಗಳೂರು. |
| 13 | ಆಯುಕ್ತರು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ಬೆಂಗಳೂರು. |
| 14 | ಅಧ್ಯಕ್ಷರು, ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ |

| ಕ್ರ. ಸಂ. | ಜಿಲ್ಲೆ | ಕೆರೆಗಳ ಸಂಖ್ಯೆ | ಕೆರೆ ಅಂಗಳದ ವಿಸ್ತೀರ್ಣ (ಹೆಕ್ಟೇರ್‌ಗಳಲ್ಲಿ) | ಸರ್ವೆ ಕಾರ್ಯ ಕೈಗೊಂಡ ಕೆರೆಗಳ ಸಂಖ್ಯೆ | ಸರ್ವೆ ಕಾರ್ಯ ಬಾಕಿ ಇರುವ ಕೆರೆಗಳ ಸಂಖ್ಯೆ | ಒತ್ತುವರಿಯಾದ ಕೆರೆಗಳ ಸಂಖ್ಯೆ | ಒತ್ತುವರಿಯಾದ ವಿಸ್ತೀರ್ಣ (ಹೆಕ್ಟೇರ್‌ಗಳಲ್ಲಿ) | ಒತ್ತುವರಿ ತೆರವುಗೊಳಿಸಿದ ಕೆರೆಗಳ ಸಂಖ್ಯೆ | ತೆರವುಗೊಳಿಸಿದ ವಿಸ್ತೀರ್ಣ (ಹೆಕ್ಟೇರ್‌ಗಳಲ್ಲಿ) | ಒತ್ತುವರಿ ತೆರವು ಗೊಳಿಸಬೇಕಾದ ಕೆರೆಗಳ ಸಂಖ್ಯೆ | ಒತ್ತುವರಿ ತೆರವುಗೊಳಿಸ ಬೇಕಾಗಿರುವ ವಿಸ್ತೀರ್ಣ (ಹೆಕ್ಟೇರ್‌ಗಳಲ್ಲಿ) | ಒತ್ತುವರಿ ತೆರವುಗೊಳಿಸಲು ತೆಗೆದುಕೊಂಡಿರುವ ಕ್ರಮ | | | ಷರಾ |
|---|---|---|---|---|---|---|---|---|---|---|---|---|---|---|---|
| | | | | | | | | | | | | ಬೌಂಡರಿ ಟ್ರೆಂಚ್ | ಚೈನ್ ಲಿಂಕ್ ಫೆನ್ಸಿಂಗ್ | ಬೇಲಿ ಹಾಕಲಾದ ಕೆರೆಗಳ ಸಂಖ್ಯೆ | |
| 1 | 2 | 3 | 4 | 5 | 6 | 7 | 8 | 9 | 10 | 11 | 12 | 13 | 14 | 15 | 16 |
| 14 | ಹಾಸನ | 168 | 6937.65 | 9 | 159 | | | | | | | 4 | 0 | | 9 ಕೆರೆಗಳ ಸರ್ವೆ ಕಾರ್ಯ ಕೈಗೊಂಡಿದ್ದು, ಸರ್ವೆ ಇಲಾಖೆಯಿಂದ ಸರ್ವೆ ಕಾರ್ಯವನ್ನು ಈಗಾಗಲೇ ಕೈಗೊಂಡಿದ್ದು, ಒತ್ತುವರಿ ಮಾಹಿತಿಯನ್ನು ಸಲ್ಲಿಸಲು ಕೋರಿ ಸಂಬಂಧಪಟ್ಟ ತಾಲ್ಲೂಕುಗಳ ತಾಹಶೀಲ್ದಾರ್‌ರವರಿಗೆ ಪತ್ರ ಬರೆಯಲಾಗಿದೆ. ಬಾಕಿ ಕೆರೆಗಳ ಸರ್ವೆಯನ್ನು ಕೈಗೊಳ್ಳಲು ಸರ್ವೆ ಇಲಾಖೆಗೆ ಸೂಚಿಸಲು ತಾಹಶೀಲ್ದಾರ್‌ರವರಿಗೆ ಕೋರಲಾಗಿದೆ |
| 15 | ದಕ್ಷಿಣ ಕನ್ನಡ | 2 | 4.39 | 2 | 0 | 1 | 0.34 | 1 | 0.34 | 0 | 0.00 | 1 | 0 | 0 | |
| 16 | ಉಡುಪಿ | 4 | 36.78 | 4 | 0 | 3 | 0.42 | 3 | 0.42 | 0 | 0.00 | 3 | 0 | 0 | |
| 17 | ಕೊಡಗು | 29 | 45.54 | 29 | 0 | 13 | 4.45 | 13 | 4.45 | 0 | 0.00 | 13 | 0 | 0 | |
| 18 | ಬೆಳಗಾವಿ | 290 | 3592.507 | 233 | 57 | 8 | 6.503 | 8 | 6.503 | 0 | 0 | 220 | 0 | 0 | |
| 19 | ಧಾರವಾಡ | 112 | 1397.47 | 74 | 38 | 0 | 0 | 0 | 0 | 0 | 0 | 42 | 0 | 0 | |
| 20 | ಗದಗ | 32 | 1385.648 | 32 | 0 | 1 | 0.46 | 0 | 0 | 1 | 0.46 | 25 | 0 | 0 | |
| 21 | ಹಾವೇರಿ | 264 | 5124.64 | 74 | 190 | 26 | 16.44 | 26 | 16.44 | 0 | 0 | 64 | 0 | 0 | |
| 22 | ಉತ್ತರ ಕನ್ನಡ | 91 | 1357.47 | 60 | 31 | 1 | 1.87 | 0 | 0 | 1 | 1.87 | 60 | 0 | 0 | |
| 23 | ವಿಜಯಪುರ | 157 | 5160.93 | 133 | 24 | 7 | 20.74 | 7 | 20.74 | 0 | 0 | 99 | 1 | 0 | |
| 24 | ಬಾಗಲಕೋಟೆ | 69 | 2389.06 | 69 | 0 | 19 | 259.91 | 18 | 237.28 | 1 | 22.63 | 66 | 0 | 0 | |
| 25 | ಕಲಬುರಗಿ | 169 | 3525.52 | 169 | 0 | 1 | 0.9 | 1 | 0.9 | 0 | 0 | 83 | 0 | 0 | |
| 26 | ಯಾದಗಿರ | 71 | 2955.07 | 71 | 0 | 0 | 0 | 0 | 0 | 0 | 0 | 67 | 0 | 0 | |
| 27 | ಬೀದರ | 125 | 2578.4 | 119 | 6 | 22 | 36.25 | 9 | 9.11 | 13 | 27.14 | 108 | 1 | 0 | |
| 28 | ಬಳ್ಳಾರಿ | 36 | 1099.11 | 33 | 3 | 2 | 1.1 | 0 | 0 | 2 | 1.1 | 33 | 0 | 0 | |
| 29 | ವಿಜಯನಗರ | 84 | 4963.24 | 84 | 0 | 0 | 0 | 0 | 0 | 0 | 0 | 84 | 0 | 0 | |
| 30 | ಕೊಪ್ಪಳ | 122 | 2743.28 | 112 | 10 | 0 | 0 | 0 | 0 | 0 | 0 | 112 | 0 | 0 | |
| 31 | ರಾಯಚೂರು | 73 | 2283.65 | 73 | 0 | 0 | 0 | 0 | 0 | 0 | 0 | 73 | 0 | 0 | |

## ವಿಧಾನ ಪರಿಷತ್ತಿನ ಸದಸ್ಯರಾದ ಮಾನ್ಯ ಶ್ರೀ ಕೆ.ಎ. ತಿಪ್ಪೇಸ್ವಾಮಿ ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:466 ಕ್ಕೆ ಅನುಬಂಧ-2

| ಕ್ರ. ಸಂ. | ಜಿಲ್ಲೆ | ಕೆರೆಗಳ ಸಂಖ್ಯೆ | ಕೆರೆ ಅಂಗಳದ ವಿಸ್ತೀರ್ಣ (ಹೆಕ್ಟೇರ್‌ಗಳಲ್ಲಿ) | ಸರ್ವೆ ಕಾರ್ಯ ಕೈಗೊಂಡ ಕೆರೆಗಳ ಸಂಖ್ಯೆ | ಸರ್ವೆ ಕಾರ್ಯ ಬಾಕಿ ಇರುವ ಕೆರೆಗಳ ಸಂಖ್ಯೆ | ಒತ್ತುವರಿಯಾದ ಕೆರೆಗಳ ಸಂಖ್ಯೆ | ಒತ್ತುವರಿಯಾದ ವಿಸ್ತೀರ್ಣ (ಹೆಕ್ಟೇರ್‌ಗಳಲ್ಲಿ) | ಒತ್ತುವರಿ ತೆರವುಗೊಳಿಸಿದ ಕೆರೆಗಳ ಸಂಖ್ಯೆ | ತೆರವುಗೊಳಿಸಿದ ವಿಸ್ತೀರ್ಣ (ಹೆಕ್ಟೇರ್‌ಗಳಲ್ಲಿ) | ಒತ್ತುವರಿ ತೆರವು ಗೊಳಿಸಬೇಕಾದ ಕೆರೆಗಳ ಸಂಖ್ಯೆ | ಒತ್ತುವರಿ ತೆರವುಗೊಳಿಸ ಬೇಕಾಗಿರುವ ವಿಸ್ತೀರ್ಣ (ಹೆಕ್ಟೇರ್‌ಗಳಲ್ಲಿ) | ಒತ್ತುವರಿ ತೆರವುಗೊಳಿಸಲು ತೆಗೆದುಕೊಂಡಿರುವ ಕ್ರಮ | | | ಷರಾ |
|---|---|---|---|---|---|---|---|---|---|---|---|---|---|---|---|
| | | | | | | | | | | | | ಬೌಂಡರಿ ಟ್ರೆಂಚ್ | ಚೈನ್ ಲಿಂಕ್ ಫೆನ್ಸಿಂಗ್ | ಬೇಲಿ ಹಾಕಲಾದ ಕೆರೆಗಳ ಸಂಖ್ಯೆ | |
| 1 | 2 | 3 | 4 | 5 | 6 | 7 | 8 | 9 | 10 | 11 | 12 | 13 | 14 | 15 | 16 |
| 1 | ಬೆಂಗಳೂರು ನಗರ | 46 | 2330.43 | 39 | 7 | 39 | 133.39 | 27 | 107.24 | 12 | 26.14 | 20 | 3 | | |
| 2 | ಬೆಂಗಳೂರು ಗ್ರಾಮಾಂತರ | 98 | 6100.60 | 86 | 12 | 82 | 845.36 | 80 | 661.40 | 2 | 183.96 | 81 | 0 | | |
| 3 | ರಾಮನಗರ | 101 | 4609.51 | 82 | 19 | 82 | 417.42 | 82 | 417.42 | 0 | 0.00 | 82 | 0 | | |
| 4 | ಕೋಲಾರ | 143 | 12102.43 | 139 | 4 | 117 | 2959.95 | 114 | 2886.09 | 3 | 73.86 | 112 | 2 | 0 | ಪ್ರಸ್ತುತ ಸಣ್ಣ ನೀರಾವರಿ ಎಲ್ಲಾ ಕೆರೆಗಳ ಪಟ್ಟಿಯೊಂದಿಗೆ ಕೆರೆಗಳ ಸರ್ವೆ ಮಾಡಿಸಿ, ಹದ್ದುಬಸ್ತು ಗುರುತಿಸಿ ನೀಡಲು ಕೋರಿ ಈಗಾಗಲೇ ಸಂಬಂಧಪಟ್ಟ ತಹಶೀಲ್ದಾರ್, ನಿರ್ದೇಶಕರು ಭೂ ದಾಖಲೆಗಳ ಇಲಾಖೆ, ಕೋಲಾರ, ಸಹಾಯಕ ನಿರ್ದೇಶಕರು, ಭೂ ದಾಖಲೆಗಳ ಇಲಾಖೆ, ಕೋಲಾರ ರವರಿಗೆ ಪತ್ರ ಸಂಖ್ಯೆ:1227/24-25/ದಿನಾಂಕ:01-08-2024, 1543/24-25/ದಿನಾಂಕ:18-09-2024, 1649/24-25/ದಿನಾಂಕ:01-10-2024, 2053/24-25/ದಿನಾಂಕ:28-11-2024 ರಂದು ಪತ್ರಗಳನ್ನು ಬರೆಯಲಾಗಿರುತ್ತದೆ. ಮಾನ್ಯ ಜಿಲ್ಲಾಧಿಕಾರಿಗಳ ಸೂಚನೆಯಂತೆ ಪುನಃ ಒತ್ತುವರಿ ತೆರವು ಕ್ರಮ ಕೈಗೊಳ್ಳುವಂತೆ ತಹಶೀಲ್ದಾರ್, ಎ.ಡಿ.ಎಲ್.ಆರ್ ರವರಿಗೆ ಪತ್ರ ಬರೆದು ಸಂಬಂಧಪಟ್ಟ ತಹಶೀಲ್ದಾರ್ ರವರಿಗೆ ನಿರ್ದೇಶನ ನೀಡಲು ಕೋರಲಾಗಿರುತ್ತದೆ. |
| 5 | ಚಿಕ್ಕಬಳ್ಳಾಪುರ | 203 | 25621.11 | 123 | 80 | 123 | 2556.54 | 84 | 2508.44 | 39 | 48.10 | 82 | 2 | 0 | |
| 6 | ಚಿತ್ರದುರ್ಗ | 185 | 19753.54 | 183 | 2 | 72 | 263.55 | 61 | 220.59 | 11 | 42.96 | 22 | 0 | | |
| 7 | ದಾವಣಗೆರೆ | 82 | 4391.37 | 82 | 0 | 21 | 106.03 | 20 | 102.77 | 1 | 3.26 | 16 | 0 | | |
| 8 | ಶಿವಮೊಗ್ಗ | 306 | 7342.28 | 66 | 240 | 30 | 36.32 | 28 | 34.82 | 2 | 1.50 | 28 | 0 | 0 | |
| 9 | ಚಿಕ್ಕಮಗಳೂರು | 127 | 3700.03 | 69 | 58 | 34 | 43.38 | 12 | 16.19 | 22 | 27.19 | 9 | 0 | 0 | |
| 10 | ತುಮಕೂರು | 426 | 27815.77 | 211 | 215 | 209 | 908.29 | 207 | 894.12 | 2 | 13.63 | 211 | 3 | 0 | |
| 11 | ಮೈಸೂರು | 50 | 1126.02 | 31 | 19 | 31 | 141.56 | 31 | 141.56 | 0 | 0.00 | | | | |
| 12 | ಚಾಮರಾಜನಗರ | 65 | 2798.56 | 43 | 22 | 43 | 420.73 | 41 | 412.98 | 2 | 7.75 | | | | |
| 13 | ಮಂಡ್ಯ | 48 | 2040.93 | 48 | 0 | 17 | 62.80 | 15 | 50.34 | 2 | 12.46 | 46 | 0 | 0 | |

ವಿಧಾನ ಪರಿಷತ್ತಿನ ಸದಸ್ಯರಾದ ಮಾನ್ಯ ಶ್ರೀ ಕೆ.ಎ. ತಿಪ್ಪೇಸ್ವಾಮಿ ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:466 ಕ್ಕೆ ಅನುಬಂಧ-3

| ಕ್ರ. ಸಂ. | ಲೆಕ್ಕಶೀರ್ಷಿಕೆ | ಕೆರೆಗಳ ದುರಸ್ಥಿಗಾಗಿ ನೀಡಿರುವ ಅನುದಾನ (ರೂ.ಲಕ್ಷಗಳಲ್ಲಿ) | | | | | ಷರಾ |
|---|---|---|---|---|---|---|---|
| | | 2019-20 | 2020-21 | 2021-22 | 2022-23 | 2023-24 | |
| 1 | 2 | 3 | 4 | 5 | 6 | 7 | 8 |
| 1 | 4702-ಕೆರೆಗಳ ಆಧುನೀಕರಣ (ನಬಾರ್ಡ್) | 1217.20 | 365.99 | 658.91 | 1410.03 | 1748.02 | |
| 2 | 4702-ಕೆರೆಗಳ ಆಧುನೀಕರಣ-ಪ್ರಧಾನ ಕಾಮಗಾರಿಗಳು | 12934.69 | 13598.94 | 13257.55 | 26726.30 | 20930.22 | |
| 3 | 4702- ವಿಷೇಶ ಅಭಿವೃದ್ದಿ ಯೋಜನೆ | 907.00 | 86.11 | 250.31 | 0.00 | 0.00 | |
| 4 | 2702-ಕೆರೆಗಳ ದುರಸ್ತಿ ಮತ್ತು ನಿರ್ವಹಣೆ | 558.27 | 709.07 | 716.37 | 151.13 | 526.77 | |
| 5 | 4702-ನಬಾರ್ಡ-ಕೆರೆಗಳ ಆಧುನೀಕರಣ | 277.47 | 72.84 | 139.51 | 314.90 | 245.88 | |
| 6 | 4702-ಕೆರೆಗಳ ಆಧುನೀಕರಣ ಪ್ರಧಾನ ಕಾಮಗಾರಿಗಳು | 6103.66 | 7493.66 | 7281.37 | 11713.13 | 13390.68 | |
| 7 | 4702-00-101-13-132 ಕೆರೆಗಳ ದುರಸ್ಥಿ ಮತ್ತು ಪುನ:ಶ್ಚೇತನ | 310.48 | 0.00 | 0.00 | 0.00 | 0.00 | |